International Journal of Kannada Research 2024; 10(3): 90-94

International Journal of Kannada Research
www.kannadajournal.com

**ISSN: 2454–5813**
IJKR 2024; 10(3): 90-94
© 2024 IJKR
www.kannadajournal.com
Received: 16-05-2024
Accepted: 19-06-2024

**ಕೃಷ್ಣಮೂರ್ತಿ.ಜಿ**
Assistant Professor, Department of Language, Triveni Institute of Commerce and Management, No.28/29/39, Hessarghatta Main Road, Mallasandra, Bangalore, Karnataka, India

**Corresponding Author:**
**ಕೃಷ್ಣಮೂರ್ತಿ.ಜಿ**
Assistant Professor, Department of Language, Triveni Institute of Commerce and Management, No.28/29/39, Hessarghatta Main Road, Mallasandra, Bangalore, Karnataka, India

# ವಚನಗಳಲ್ಲಿ ವೈಚಾರಿಕತೆಯ ಮುಖಾಮುಖಿ

**ಕೃಷ್ಣಮೂರ್ತಿ.ಜಿ**

**DOI:** https://doi.org/10.22271/24545813.2024.v10.i3b.1022

**ಅಮೂರ್ತ**

೧೨ನೇ ಶತಮಾನದ ವಚನ ಸಾಹಿತ್ಯ/ ಚಳುವಳಿ ಎಂಬುದು ಮನುಕುಲ ಒಂದೊಮ್ಮೆ ಹಿಂದೆತಿರುಗಿ ನೋಡುವಂತೆ ಮಾಡಿದ ಮಹಾನ್ ಕ್ರಾಂತಿ ಎಂದೇ ಕರೆಯಬೇಕಾಗಿದೆ. ಮನುಕುಲದಲ್ಲಿನ ಕುಂದುಕೊರತೆಗಳಾದ ಅಂದಿನ ಅನೇಕ ಅಸಮಾನತೆಗಳು, ಧರ್ಮಪರ ಚಿಂತನೇಗಳು, ಕುಲಬೇಧಗಳಿಲ್ಲದ, ಲಿಂಗಬೇಧಗಳಿಲ್ಲದ ಮುನ್ನಡೆಗೆ ವಚನಗಳು ಸಾಕ್ಷಿಯಾದ ರೀತಿ ಇವತ್ತಿಗೂ ಪ್ರಸ್ತುತವಾದ ವೈಚಾರಿಕತೆಯ ಮಹಾ ಮುನ್ನಡೆಯಾಗಿದೆ ಕನ್ನಡ ಸಾಹಿತ್ಯ ಚರಿತ್ರೆ ಗ್ರಹಿಸಬೇಕಾಗಿದೆ.

**ಮುಖ್ಯಸೂಚಿಪದಗಳು:** ವೈಚಾರಿಕತೆ, ವಚನ ಕ್ರಾಂತಿ, ವಚನ ಚಳುವಳಿ, ಸಾಂಸ್ಕೃತಿಕ ಮುಖಾಮುಖಿ, ವೈಚಾರಿಕ ಮುಖಾಮುಖಿ, ಕನ್ನಡ ಸಾಹಿತ್ಯ ಚರಿತ್ರೆ

**ಪೀಠಿಕೆ**

ವಚನ ಸಾಹಿತ್ಯ / ಚಳುವಳಿ ಎಂಬುದು ಮೂಲ ಆರ್ಥಿಕತೆ ಆಧಾರವಾಗಿದ್ದರೂ ತನ್ನ ಅಂತರಾಳದಲ್ಲಿ ಸಮಾಜ, ರಾಜಕೀಯ ಪ್ರಭುತ್ವ ಮತ್ತು ಧಾರ್ಮಿಕತೆಯನ್ನು ಆಳವಾಗಿ ಚರ್ಚಿಸುವುದನ್ನು ಗಮನಿಸಬಹುದು. ಆ ಹೊತ್ತಿನ ಧಾರ್ಮಿಕ ಹಿತಾಸಕ್ತಿಯನ್ನು ಜನ ಸಂಬಂಧಗಳನ್ನು ಮುರಿಯುವ ಆ ಮೂಲಕ ಜಾತಿ, ವರ್ಣ, ವರ್ಗಗಳನ್ನು ಕಟ್ಟಿ ಅಸಮಾನತೆಯ ವ್ಯವಸ್ಥೆ ಎಂಬುದು ರೂಪಗೊಂಡಿತ್ತು. ಆ ಸಂದರ್ಭದ ಸಾಮಾಜಿಕ ಜಡತ್ವವು ಮಾನವ ಮೌಲ್ಯಗಳನ್ನು ಸುಡಲು ಶುರುಮಾಡಿದವು. ಈ ಜಡತ್ವವನ್ನು ವಿರೋಧಿಸುವ ಮೂಲಕ ವೈಚಾರಿಕ ಪ್ರಜ್ಞೆಯನ್ನು ವಚನಗಳ ವಚನಕಾರರು ಸಮಾಜದಲ್ಲಿ ನಿರ್ಮಿಸುವ ಕೆಲಸವನ್ನು ಮುಂದುವರೆಸಿದರು. ಆ ಸಂದರ್ಭದ ಪಾಂಡಿತ್ಯ ಭಾಷೆಯನ್ನು ತೊರೆದು ಜನ ಭಾಷೆಯಲ್ಲಿ ತನ್ನ ವಚನಗಳನ್ನು ಕಟ್ಟಲು ಪ್ರಾರಂಭಿಸಿದರು. ೧೦ನೇ ಶತಮಾನದ ಸಾಮಾಜಿಕ, ಸಾಂಸ್ಕೃತಿಕ ಯಜಮಾನ್ಯ ವ್ಯವಸ್ಥೆಯನ್ನು ಅದರಲ್ಲಿನ ಮೌಢ್ಯ ಪ್ರಜ್ಞೆಯನ್ನು ಆ ಹೊತ್ತಿನ ಕೆಟ್ಟ ಸಂಪ್ರದಾಯಗಳನ್ನು ನೇರವಾಗಿ ತಮ್ಮ ವಚನಗಳ ಮೂಲಕ ವಿರೋಧಿಸಲು ಪ್ರಾರಂಭಿಸಿದರು. ಆ ಮೂಲಕ ೧೨ನೇ ಶತಮಾನ ಒಂದು ಹೊಸ ಕ್ರಾಂತಿಗೆ ಕಾರಣವಾಯಿತು. ಸಮಾಜದಲ್ಲಿನ ಬಡವ-ಬಲ್ಲಿದ, ಮೇಲು-ಕೀಳು, ಗಂಡು-ಹೆಣ್ಣು ಈ ರೀತಿಯ್ ಅಸಮಾನತೆಗಳು ಅಂತ್ಯವಾಗಲು ಪ್ರಾರಂಭವಾಗುತ್ತದೆ.

ಈ ವಚನಕ್ರಾಂತಿ ಮನುಷ್ಯ ಸಂಬಂಧಗಳನ್ನು ಇನ್ನಷ್ಟು ಹತ್ತಿರಗೊಳಿಸುವ ಮಹಾನ್ ಕ್ರಾಂತಿಯಾಗಿ ವೈಚಾರಿಕತೆಯ ಭಾಗವಾಗುಯಿತು. ವಚನಕಾರ ಈ ಎಲ್ಲರು ಕಾಯಕವನ್ನು ನಂಬಿದ ಕಾಯಕ ಜೀವಿಗಳಾಗಿದ್ದಾರೆ. ಅವರವರ ಕುಲ ಕಸಬುಗಳನ್ನು ಮಾಡುತ್ತಲೇ ಅನುಭವದ ಮೂಲಕ ಸಮಾಜವನ್ನು ತಲುಪುವ ಕೆಲಸವನ್ನು ಮಾಡುತ್ತಲೇ ಸಮಾಜೋ ಸಂವೇದನೆಯನ್ನು ಹುಟ್ಟುಹಾಕುತ್ತಾರೆ. ತಮ್ಮದೇ ನೆಲೆ-ದೃಷ್ಟಿಕೋನಗಳನ್ನು ಕಟ್ಟುವುದರ ಜೊತೆಗೆ ತನ್ನ ಸುತ್ತಲಿನ ಜಗತ್ತನ್ನು ವಿಮರ್ಶಿಸುವ ವಚನ ಸಾಹಿತ್ಯ / ಪರಂಪರೆ ಕುಲ -ನೆಲೆಗಳನ್ನು ಮೀರಿದ ಒಂದು ಹೊಸ ಆಯಾಮವಾಗಿ ಚವನಗಳನ್ನು ನಾವು ಗ್ರಹಿಸಬಹುದು.

ಒಂದೇ ನೆಲೆಯಲ್ಲಿ ಬಹುತ್ವವನ್ನು ಬಿತ್ತುವ ಆ ಮೂಲಕ ಈ ವರೆಗಿನ ವೈದಿಕ ಪ್ರಜ್ಞೆಯನ್ನು ವಿರೋಧಿಸುವ ಸಮಸಂಸ್ಕೃತಿಯನ್ನು ಸಮಾನ ಆಲೋಚನೆಗಳನ್ನು ಬಿತ್ತುವ ಕೆಲಸವನ್ನು ಚಿಂತಿಸಿದ ಕಾಲವಾಗಿದೆ. ಭಿನ್ನ ಸಂಸ್ಕೃತಿಗಳನ್ನು ಒಪ್ಪುವ ಮೂಲಕ ಇತರನ್ನು ಗೌರವಿಸುವ ಬಹುತ್ವ ನೆಲೆಗಟ್ಟು ಹಾಗೂ ವೈಚಾರಿಕ ನೆಲೆಗಳನ್ನು ಕಿತ್ತಿಕೊಳ್ಳಲು ಸಾಧ್ಯವಾಗಿದೆ. ವೈದಿಕ/ಪುರೋಹಿತಶಾಹಿಯನ್ನು ವಿರೋಧಿಸುವ ನೆಲೆಯಲ್ಲಿ ಸಮಾಜವನ್ನು ವಿರೋಧಿಸುವ ಕೆಲಸವನ್ನು ವಚನಗಳು /ವಚನಕಾರರು ನಡೆಸಿಕೊಂಡು ಬಂದಿರುವುದನ್ನು ಗಮನಿಸಬಹುದು. ಜನ ಭಾಷೆಗೆ ಗೌರವವೇ ಇಲ್ಲದಾದ ಒಂದು ಸಂದರ್ಭದಲ್ಲಿ ಆ ಜನ ಭಾಷೆಯಲ್ಲಿ ತಮಗೆ ಅನಿಸಿದ ಎಲ್ಲ ವಿಚಾರಗಳನ್ನು ಮುಚ್ಚುಮರೆ ಇಲ್ಲದೆ ಚರ್ಚಿಸಿ ವಿಮರ್ಶೆಗೆ ಒಳಪಡಿಸಿ ಆ ಮೂಲಕ ಪರಂಪರೆ ಮೂಲಕ ನಂಬಲಾಗಿದ್ದ ಏಕ ಸಂಸ್ಕೃತಿಯ/ ಸರ್ವಾಧಿಕಾರತ್ವದ ಹಲವು ನೆಲೆಗಳಲ್ಲಿ ವಿಮರ್ಶೆಗೆ ಒಳಪಡಿಸಿದನ್ನು ನಾವು ಕಾಣಬಹುದು. ಈ ಎಲ್ಲ ಕಾರಣಗಳಿಂದ ವಚನ ಸಾಹಿತ್ಯ ಅನುಸಂಧಾನ/ ಮುಖಾಮುಖಿಯ ಅಗತ್ಯವನ್ನು ಅನಿವಾರ್ಯತೆಯನ್ನು ನಾವು ಗಮನಿಸಬೇಕು.

ತಾಳಮಾನ ಸರಿಸಮವನರಿಯೆ
ಓಜೆ ಬಜಾವಣೆಯ ಲೆಕ್ಕವನರಿಯೆ
ಅಮೃತಗಣ ದೇವಗಣವನರಿಯೆ
ಕೂಡಲ ಸಂಗಮದೇವಾ
ನಿನಗೆ ಕೇಡಿಲ್ಲವಾಗಿ ಆನು ಒಲಿದಂತೆ ಹಾಡುವೆ.

ಭಕ್ತಿಗೆ ಪರವಶನಾಗುವ ಭಕ್ತ ತನಗೆ ತಿಳಿದಂತೆ ದೇವರನ್ನು ಹಾದಿ ಒಲಿಸಿಕೊಳ್ಳುವೆ ಎಂಬುದರಲ್ಲಿ ಅವನಿಗೆ ಈವರೆಗಿನ ವ್ಯಾಕರಣವಾಗಲಿ ಛಂದಸ್ಸಾಗಲಿ ನನಗೆ ಮುಖ್ಯವಲ್ಲ ನನ್ನ ಹಾಡಿಗೆ ಭಾವ ಮುಖ್ಯ ಎಂದು ಹೇಳುವ ವಚನಕಾರರು ದೇವರು ಪೂಜಾರಿ ಭಕ್ತ ಎಂಬುದಾದ ಪದ್ಧತಿಯನ್ನು ಏಕಕಾಲದಲ್ಲಿ ವಿರೋಧಿಸುವ ಮೂಲಕ ಕಾಲಕಾಲದಿಂದ ನಂಬಿ ಬಂದಿರುವ ಪ್ರಭುತ್ವವನ್ನು ಓಲೈಸುವ, ಪಂಡಿತ ಪಾಮರರ ಭಾಷೆಯನ್ನು ಗೌರವಿಸುವ ರೀತಿರಿವಾಜುಗಳನ್ನು ಧಿಕ್ಕರಿಸುವ ದಿಟ್ಟತನದ ವಚನ ಪರಂಪರೆ / ಸಾಹಿತ್ಯವನ್ನು ಗಮನಿಸಹುದು. ಅದೇ ರೀತಿಯಾಗಿ ವಚನ ಸಾಹಿತ್ಯದ ಮಹತ್ವ ಮತ್ತು ಪ್ರಭುತ್ವ ನೆಲೆಗಳನ್ನು ಬಿಂಬಿಸುತ್ತದೆ.

ಬಸವಣ್ಣನ ವಚನಗಳ ರೀತಿಯಲ್ಲಿ ಮಾದಾರ ಚೆನ್ನಯ್ಯನು ತನ್ನ ವಚನಗಳಲ್ಲಿ ಹಿರಿಯ ಪದ್ಧತಿಯನ್ನು ವಿರೋಧಿಸುವ ಹೇಳಿಕೆಯನ್ನು ಗಮನಿಸಬಹುದು.

ಸಾಂಖ್ಯ ಸ್ವಪಚ ಅಗಸ್ತ್ಯ ಕಬ್ಬಿಲ
ದುರ್ವಾಸ ಮಚ್ಚಿಗ ದಧೀಚಿ ಕೀಲಿಗ
ಕಶ್ಯಪ ಕಮ್ಮಾರ ರೋಮಜ ಕಂಚುಗಾರ
ಕೌಂಡಿಲ್ಯ ನವಿದನೆಂದರಿದು
ಮತ್ತೆ ಕುಲವುಂಟೆಂದು ಛಲಕ್ಕೆ ಹೊರಲೇತಕೆ ?

ಮಾದಾರ ಚೆನ್ನಯ್ಯ ತನ್ನ ವಚನಗಲ್ಲಿ ಶ್ರೇಣೀಕೃತ ಸಮಾನ ವ್ಯವಸ್ಥೆಯನ್ನು ವಿಡಂಬಿಸಿದ್ದಾರೆ. ಆ ಬಾರವೆಕುಲ ಅನಾಬಾರವೆ ಹೋಲೆ ಆವಾ ಕುಲವಾದರೂ ಅರಿದಲ್ಲಿಯೇ ಪರತತ್ವಭಾವಿ ಮರೆದಲ್ಲಿಯೇ ಮಾಲಿಂ ಬಂಧ ಎಂದು ಹೇಳುವ ವಚನದಲ್ಲಿ ಕುಲವೇ ಕೇಂದ್ರವಾಗಿರುವುದನ್ನು ನಾವು ಗಮನಿಸಬಹುದು. ಬ್ರಾಹ್ಮಣ್ಯವನ್ನು ಒಪ್ಪದ ವಚನಕಾರರಲ್ಲಿ ಬಹುತೇಕರು ಕೆಳವರ್ಗದಿಂದ ಬಂದವರು. ವರ್ಣಸಂಸ್ಕೃತಿಯನ್ನು ನಂಬಿದ್ದ ಆ ಮೂಲಕ ಮೂಲಗಳನ್ನು ಬಿಡಿಸುವ ಯಜಮಾನ್ಯ ವೈದಿಕತೆಯನ್ನು ವಿರೋಧಿಸುವ ನೆಲೆ ಈ ವಚನದಲ್ಲಿ ಕಾಣಬಹುದು. ದೇವರು ಜಾತಿಗಳ ಬೂಟಾಟಿಕೆಯ ಜಾತಿ ಶ್ರೇಣಿ ವ್ಯವಸ್ಥೆಯನ್ನು ಬುಡಮೇಲಾಗಿಸುವುದನ್ನು ಕಾಣಬಹುದು.

ವೇದಕ್ಕೆ ಒರೆಯ ಕಟ್ಟುವೆ
ಶಾಸ್ತ್ರಕ್ಕೆ ನಿಗಳನಿಕ್ಕುವೆ
ತರ್ಕದ ಬೆನ್ನ ಬಾರನೆತ್ತುವೆ

ಆಗಮದ ಮೂಗ ಕೊಯ್ಯುವೆ
ನೋಡಯ್ಯ ಮಹದಾನಿ ಕೂಡಲ ಸಂಗಮದೇವಾ
ಮಾದಾರ ಚನ್ನಯ್ಯನ ಮನೆಯ ಮಗ ನಾನಯ್ಯ

ಇಲ್ಲಿನ ವಚನ ವೇದ ಆಗಮಶಾಸ್ತ್ರಗಳನ್ನು ನೇರವಾಗಿ ಟೀಕಿಸುವುದನ್ನು ಕಾಣಬಹುದು. ಇಲ್ಲಿ ವೇದಗಳ ಸಾರವನ್ನು ಒರೆಗೆ ಹಚ್ಚುವ, ಶಾಸ್ತ್ರಗಳನ್ನು ಪರಿಶೀಲನೆ ಮಾಡಿ ಅದನ್ನು ನಿಯಂತ್ರಣಕ್ಕೆ ಪಡೆಯುವ. ತರ್ಕದ ಬೆನ್ನ ಬಾರನೆತ್ತುವೆ ಅಂದರೆ ಹದಗೊಳಿಸುವೆ ಎಂಬ ಅರ್ಥಗಳನ್ನು ತಿಳಿಯಬಹುದು. ಅದೇ ರೀತಿಯಾಗಿ ವೇದ ಶಾಸ್ತ್ರಗಳನ್ನು ವಿಡಂಬಿಸುವ ಹಲವು ವಚನಗಳನ್ನು ನಾವು ಗಮನಿಸಬಹುದು.

ಕುರಿ ಕೋಳಿ ಕಿರುಮೀನು ತಿಂಬವರ
ಊರೊಳಗೆ ಇರು ಎಂಬರು
ಅಮೃತವ ಕರೆವ ಗೋವು ತಿಂಬವರ
ಊರಿಂದ ಹೊರಗಿರು ಎಂಬರು
ಆತನು ಹರಿಗೋಲಾಯಿತ್ತು ಬೊಕ್ಕಣ ಸಿದಿಕಿ ಬಾರುಕೋಲು ಪಾದರಕ್ಷೆ
ದೇವರ ಮುಂದೆ ಬರಿಸುವುದಕ್ಕೆ ಮದ್ದಳೆಯಾಯಿತು
ಈ ಬುದ್ದಲಿಕೆಯೊಳಗಣ ತುಪ್ಪವ ಶುದ್ದಮಾಡಿ
ತಿಂಬ ಗುಜ್ಜ ಹೊಲೆಯರ ಕಂಡಡೆ
ಉದ್ದ ಚಮ್ಮಾಳಿಗೆಯ ತೆಕ್ಕೊಂಡು
ಬಾಯ ಕೊಲ್ಲುವೆನು ಎಂದಾತ ನಮ್ಮ ಅಂಬಿಗರ ಚೌಡಯ್ಯ
ಕುರಿ ಕೋಳಿ ಕಿರುಮೀನು ತಿಂಬರಿಗೆಲ್ಲ
ಕುಲಜ ಕುಲಜ ಎಂತೆಂಬರು
ಪಶುಗೆ ಪಂಚಾಂಮೃತವ ಕರೆವ ಮಾದಿಗ ಕೀಳಿ ಜಾತಿಯೆಂಬರು
ಅವರೆಂತು ಕೀಳು ಜಾತಿಯಾದರು
ಜಾತಿಗಳನ್ನು ನಿವೇಕೆ ಕೀಳಾಗಿ ಕಾಣಿರೋ… ..
ಉರಿಲಿಂಗ ಪೆದ್ದಗಳರಸು ಬಲ್ಲನವ್ವಾ- ಕಾಳೆವ್ವೆ.

ಮೇಲಿನ ವಚನಗಳಲ್ಲಿ ಬರುವ ಇಬ್ಬರು ವಚನಕಾರರು ಕೆಳವರ್ಗಕ್ಕೆ ಸೇರಿದವರು. ಆತ್ಮಾಭಿಮಾನವನ್ನು ಹೊಂದಿರುವ ನಿಷ್ಠುರವಾದಿಗಳು ಆಗಿದ್ದಾರೆ. ಇವರು ಸಿದ್ಧಗೊಂಡಿರುವ ವೈಧಿಕ ವ್ಯವಸ್ಥೆಯನ್ನು ಪ್ರಶ್ನಿಸುವುದರ ಜೊತೆಗೆ ಬ್ರಾಹ್ಮಣರ ನಂಬಿಕೆಗಳನ್ನು ಪ್ರಶ್ನೆಸುತ್ತಿದ್ದಾರೆ. ಗೋವು ಪವಿತ್ರ ಅದರಂತೆ ಉಳಿದ ಪ್ರಾಣಿಗಳು ಹೇಗೆ ಅಪವಿತ್ರವಾಗಲು ಸಾಧ್ಯ ಎಂಬ ಪ್ರಶ್ನೆಯನ್ನು ತಾಳುತ್ತಾರೆ. ಗೋವಿನಂತೆ ಕುರಿ, ಕೋಳಿ, ಮೀನು ಇವುಗಳು ಸಹ ಜೀವಂತ ಪ್ರಾಣಿಗಳು ಇವುಗಳನ್ನು ಸೇವಿಸುವಂತವರು ಊರಿನೊಳಗಿದ್ದರೆ, ಗೋವನ್ನು ಸೇವಿಸುವ ಜನಾಂಗ ಸಮುದಾಯ ಊರಿನ ಹೊರಗೆ ಇರಿಸಲಾಗಿದೆ. ಇಲ್ಲಿ ಎಲ್ಲವು ಜೀವಂತ ಪ್ರಾಣಿಗಳೇ, ಯಾವುದು ಮೇಲಲ್ಲ ಯಾವುದು ಸಹ ಕೀಳಲ್ಲ. ಹಸುವನ್ನು ತಿಂದವರು ಕನಿಷ್ಠರಲ್ಲ. ಈ ರೀತಿಯ ಬೇಧ ಬಾವದ ಆಲೋಚನೆಗಳು ಯಾಕೆಂಬುದು ಕಾಳವ್ವೆಯ ಪ್ರಶ್ನೆಗಳಾಗಿವೆ. ಅಂಬಿಗರ ಚೌಡಯ್ಯ ಸಹ ಇದೆ ರೀತಿಯ ಪ್ರಶ್ನೆಗಳನ್ನು ಆಲೋಚನೆಗಳನ್ನು ವ್ಯಕ್ತಪಸುತ್ತಾ ವೃತ್ತಿಯಿಂದ ಪಡೆದುಕೊಂಡ ಉತ್ಪನ್ನಗಳನ್ನು ಬಳಕೆ ಮಾಡಿಕೊಂಡು ಜಾತಿಯಿಂದ ಹೊರಗಿಡುವ ಬ್ರಾಹಣರನ್ನು ಗುಜ್ಜಹೊಲೆಯ ಎಂದು ಖಂಡಿಸಿದರು.

ಮೇಲ್ಕಂಡ ವಚನಗಳು ಕುಲ ಕಸುಬಿನಧಾರಿತ ಶ್ರಮ ವಿಭಜನೆಯನ್ನು ಹೇಳುತ್ತವೆ. ಸತ್ತ ಗೋವಿನ ಸಿದ್ಧಲಿಕೆ, ಬುದ್ದಲಿಕೆ, ಸಗ್ಗಳಿಕೆ ಸಿದ್ಧಪಡಿಸುತ್ತಾರೆ. ಅದೇ ರೀತಿ ಮದ್ದಳೆ ದೇವರ ಮುಂದೆ ಬಾರಿಸುವುದಕ್ಕೆ ವಿಶೇಷ ವಾದ್ಯವಾಗಿ ಬಳಕೆಯಾಗುತ್ತದೆ. ಈ ಸಿದ್ಧಲಿಕೆಯಲ್ಲಿ ತುಂಬಿದ ತುಪ್ಪವನ್ನು ಬ್ರಾಹ್ಮಣರು ಹೊಲಿಗೆಯಲ್ಲಿ ಬಳಸುತ್ತಾರೆ. ತೊಗಲ ಬಾನಿಯಿಂದ ಎತ್ತಿದ ನೀರನ್ನು ಪವಿತ್ರವೆಂದು ಅನೇಕ ಕಾರ್ಯಗಳಿಗೆ ಬಳಕೆ ಮಾಡುತ್ತಾರೆ. ಈ ರೀತಿಯಾಗಿ ಬಳಸಿಕೊಳ್ಳುವ ಬ್ರಾಹ್ಮಣರು ಜಾತಿಭೇದ ಮಾಡುವುದು ಹೆಚ್ಚು ನಿಕೃಷ್ಟ ಎನಿಸುತ್ತದೆ. ಈ ಭಿನ್ನ ನೀತಿಯನ್ನು ವಚನಕಾರರು ವಿರೋಧಿಸುವುದುನ್ನು ಗಮನಿಸಬಹುದು. ಇಲ್ಲಿ ಹಸುವಿನ ಮೂಲಕ ವ್ಯಕ್ತಿ ಜಾತಿಯ ಸಮೀಕರಿಸುವ ಮಂದಬುದ್ಧಿಯ ಬ್ರಾಹ್ಮಣರನ್ನು ಖಂಡಿಸುವುದನ್ನು ನಾವು ಗಮನಿಸಬಹುದು. ಇದೆ ರೀತಿಯಾಗಿ ಕಾಳವ್ವೆಯ ಇನ್ನೊಂದು ವಚನ ಪ್ರಾಣಿಗಳನ್ನು ಯಜ್ಞದಲ್ಲಿ ಬಲಿಕೊಡುವುದನ್ನು ನಿದರ್ಶನವಾಗಿ ನೋಡಬಹುದು.

ಕೃತಯುಗದಲ್ಲಿ ಮುವತ್ತೆರಡು ಲಕ್ಷ ವರುಷದಲ್ಲಿ ಹೋಮವನಿಕ್ಕುವಾಗ
ಕುಂಜರನೆಂಬ ಆನೆಯ ಕೊಂದು ಹೋಮವನಿಕ್ಕಿದರು ಬ್ರಾಹ್ಮಣರು,

ತ್ರೇತಾಯುಗ ಹದಿನಾರು ಲಕ್ಷ ವರುಷದಲ್ಲಿ ಬ್ರಾಹ್ಮಣರು ಹೋಮವನ್ನಿಕ್ಕುವಾಗ
ಅಶ್ವನೆಂಬ ಕುದುರೆಯ ಕೊಂದು ಹೋಮನಿಕ್ಕಿದರು ಬ್ರಾಹ್ಮಣರು.
ಕಲಿಯುಗದಲ್ಲಿ ನಾಲ್ಕು ಲಕ್ಷ ವರುಷದಲ್ಲಿ ಹೋಮನಿಕ್ಕುವಾಗ
ಉರಿಲಿಂಗಪೆದ್ದಿಗಳರಸ ಒಲ್ಲನವ್ವಾ.

ಇಲ್ಲಿ ಧರ್ಮದ ಹೆಸರಿನಲ್ಲಿ ಆನೆ, ಕುದುರೆ, ಆಡು ಈ ರೀತಿಯ ಅನೇಕ ಪ್ರಾಣಿಗಳನ್ನು ಬ್ರಾಹ್ಮಣರು ಯಜ್ಞದ ಹೆಸರಿನಲ್ಲಿ ಸೇವಿಸುವುದನ್ನು ಸ್ಪಷ್ಟವಾಗಿ ಗಮನಿಸಬಹುದು.

ಸಗಣಿಯ ಬೆನಕಂಗೆ ಸಂಪಿಗೆಯರಳಲ್ಲಿ ಪೂಜಿಸಿದರೆ
ರಂಜನಯಲ್ಲದೆ ಅದರ ಗಂಜಳ ಬಿಡದಣ್ಣ
ಮಣ್ಣು ಪುತ್ತಳಿಯ ಮಾಣದೆ ಜಲದಲ್ಲಿ ತೊಳೆದರೆ
ನಿಚ್ಚ ನಿಚ್ಚ ಕೆಸರಹುದಲ್ಲದೆ ಅದರಚಗಚು ಗಬಿಡಣ್ಣ
ಲೋಕದ ವನವರಿಗೆ ಶಿವದೀಕ್ಷೆಯ ಕೊಟ್ಟರೆ
ಕೆಟ್ಟವನೇಕೆ ಸದ್‌ಭಕ್ತನಹನು ಕೂಡಲಸಂಗಮದೇವಾ.

ಬಸವಣ್ಣನ ಈ ವಚನವು ಶಿವದೀಕ್ಷೆಯ ವಿಚಾರವನ್ನು ಚರ್ಚಿಸುತ್ತಿದೆ. ಸಗಣಿಯಿಂದ ಗಣಪನನ್ನು ಮಾಡಿ ಪೂಜಿಸುವುದಾಗಲಿ ಮಣ್ಣಿನಿಂದ ಮೂರ್ತಿಯನ್ನು ಮಾಡಿದಾಗಲಇ ಅವುಗಳ ಮೂಲಗುಣಗಳಿಂದ ಮರೆಮಾಡಚಲು ಸಾಧ್ಯವಾಗದು ಯಾಕೆಂದರೆ ಮಣ್ಣಿನ ಮೂರ್ತಿಯನ್ನು ದಿನವೂ ಸ್ವಚ್ಛ ಮಾಡುವುದರಿಂದ ಕೆಸರು ಹೆಚ್ಚುವುದೇ ವಿನಹ ಮೂರ್ತಿ ಶುದ್ಧವಾಗದು ಅದೇರೀತಿ ಪ್ರತಿ ವ್ಯಕ್ತಿಯಲ್ಲಿ ಅವನದೇ ಆದ ಗುಣಗಳಿವೆ ಆದರಿಂದ ಸಾಮಾನ್ಯ ಶಿವ ದೀಕ್ಷೆಯನ್ನು ಪಡೆದು ದೈವಿಕ ಭಾವ, ಪೂಜೆಪುನಸ್ಕಾರಗಳಿಂದ ಮೂಲಗುಣವನ್ನು ಬಿಡಲಾಗದು.

ಅರ್ಚನೆ ಪೂಜನೆ ನೇಮವಲ್ಲ ಮಂತ್ರ ತಂತ್ರ ನೇಮವಲ್ಲ;
ದೀಪದೀಪಾರತಿ ನೇಮವಲ್ಲ?
ಪರಧನ ಪರಸ್ತ್ರೀ ಪರದೈವಗಳಿಗೆ ಎರಗದಿಪ್ಪುದೆನೇಮ
ಶಂಭುಜಕೇಶ್ವರನಲಿ ಇವು ಕಾಣಿರಣ್ಣಾ ನಿತ್ಯನೇಮ

ಭಾರತ ಸಮಾಜ ದೇವರ ಮೇಲಿನ ಭಕ್ತಿ ನಂಬಿಕೆಗಳಿಗೆ ಹೆಸರುವಾಸಿಯಾಗಿದೆ. ಇದನ್ನೆ ಬಡವಾಳ ಮಾಡಿಕೊಂಡ ಮಠಮಾನ್ಯಗಳು ಸ್ವದೈವಿಪುರುಷ/ ಮಹಿಳೆಯರು ಈ ಬಂಡವಾಳವನ್ನು ಬಳಸಿಕೊಂಡು ಅನೇಕರನ್ನು ನಂಬಿಸಿರುವುದು ಸಹಜವಾದ ವಿಚಾರಗಳಾಗಿವೆ. ಆದರೆ ಪರಧನ, ಪರಧರ್ಮ, ಪರಸ್ತ್ರೀಯರ ವಿಚಾರವಾಗಿ ನಾವು ಹೊಂದಬೇಕಿರುವ ನೇಮನಿಷ್ಠಗಳನ್ನು ನಾವು ವಿಚಾರ ಮಾಡಬೇಕಿದೆ.

ದೇಹದೊಳಗೆ ದೇವಾಲಯವಿದ್ದು ಮತ್ತೆ ಬೇರೆ ದೇವಾಲಯವೇಕೆ?
ಎರಡಕ್ಕೂ ಹೇಳಲಿಲ್ಲಯ್ಯ !
ಗುಹೇಶ್ವರ ನೀನು ಕಲ್ಲಾದರೆ ನಾನೇನಪ್ಪನಾ?
ಕಟ್ಟಿದ ಲಿಂಗವ ಬಿಟ್ಟು ಬೆಟ್ಟದ ಲಿಂಗಕ್ಕೆ ಹೋಗಿ
ಹೊಟ್ಟಡಿಯಾಗಿ ಬೀಳುವ
ಲೊಟ್ಟೆ ಮೂಳನ ಕಂಡರೆ
ಮೆಟ್ಟಿದ ಎಡವ ಪಾದರಕ್ಷೆಯ ತೆಗೆದುಕೊಂಡು
ಲಟಲಟನೆ ಹೊಡಿ ಎಂದಾತನಂಬಿಗರ ಚೌಡಯ್ಯ

ಜಿ.ಎಸ್. ಶಿವರುದ್ರಪ್ಪ ಅವರ ಎಲ್ಲೋ ಹುಡುಕಿದೆ ಇಲ್ಲದ ದೇವರ ಎಂಬಂತೆ ದೇವರು ನಮ್ಮೊಳಗೆ ಇದ್ದಾನೆ ಅವನು ನಮ್ಮೊಳಗೆ ಜೀವಿಸುವಾಗೆ ಮಾಡುವ ಶಕ್ತಿ ಭಕ್ತಿನಿಗೆ ಮಾತ್ರ ಸಾಧ್ಯ ಎಂಬುದಕ್ಕೆ ಈ ವಚನಗಳು ಸಾಕ್ಷಿಯಾಗುತ್ತದೆ. ಬಾಹ್ಯ ಸ್ವರೂಪದಲ್ಲಿನ ಕಟ್ಟಡ ರೂಪದ ದೇವಾಲಯಗಳಿಗೆ ಅಂತ್ಯವೆಂಬಂತೆ ಶಿಥಿಲವಾಗುವ ಸಾಧ್ಯತೆ ಇದೆ. ಆದರೆ ನಮ್ಮೊಳಗೆ ಸೃಷ್ಠಿಕೊಂಡಿರುವ ದೇಗುಲಕ್ಕೆ ಯಾವುದೇ ಕಟ್ಟಡ/ ದೇವಾಲಯದ ಅಗತ್ಯ ಇಲ್ಲ ಆದರಂತೆ ದೇವರು ಮತ್ತು ಚೌಡಯ್ಯ ತನ್ನೊಳಗಿನ ದೇವರನ್ನು ಬಿಟು ದೇವಾಲಯ ಸುತ್ತವವನನ್ನು ಚೆಪ್ಪಲಿಗಳಲ್ಲಿ ಹೊಡಿ ಎಂಬುದನ್ನು ಹೇಳುತ್ತಾನೆ. ಇದು ಇಷ್ಟ ಲಿಂಗ ಆರಾಧನೆಯನ್ನು ಹಾಗೂ ಚಲನಶೀಲತೆಯನ್ನು ಪ್ರತಿಪಾಧಿಸುತ್ತದೆ.

ವೇದಶಾಸ್ತ್ರ ಆಗಮ ಪುರಾಣಗಳೆಲ್ಲ
ಕೊಟ್ಟಣವ ಕುಟ್ಟಿದ ನುಚ್ಚು ತೌಡು ಕಾಣಿಬೋ
ಇವ ಕುಟ್ಟಲೇಕೆ ?ಕುಸುಕಲೇಕೆ
ಅತ್ತಲಿತ್ತ ಹರಿವ ಮನವ ಶಿರವನರಿದಡೆ
ಬಚ್ಚಬರಿಯ ಬಯಲು ಚೆನ್ನಮಲ್ಲಿಕಾರ್ಜುನ,

ಮನುಷ್ಯನಿಗೆ ತನ್ನ ಮನದ ನಿಯಂತ್ರಣದಿಂದ ಎಲ್ಲವೂ ಸಾಧ್ಯ ಎಂಬುದನ್ನು ಅಕ್ಕ ತನ್ನ ಈ ವಚನದ ಮೂಲಕ ವಿವರಿಸಿದ್ದಾರೆ.

ಅ ಮೂಲಕ ವೈದಿಕ ವ್ಯವಸ್ಥೆಯನ್ನು ವಿರೋಧಿಸಿದ್ದಾರೆ. ಮೇಲ್ಕಂಡ ವಚನಗಳು ವಚನ ಪರಂಪರೆ ವೈಚಾರಿಕತೆಯನ್ನು ಅದರ ಸೂಕ್ಷ್ಮ ಒಳನೋಟಗಳನ್ನು ಎಲ್ಲರಲ್ಲಿ ಬಿತ್ತಿ ಬೆಳೆಯುವುದರಲ್ಲಿ ಪ್ರಮುಖ ಪಾತ್ರ ವಹಿಸುವುದನ್ನು ಗಮನಿಸಬಹುದು.

## ಪರಾಮರ್ಶನ ಗ್ರಂಥಗಳು


1. ವಚನ ಸಂಚಯ ಅಂತರ್ಜಾಲ : https://vachana.sanchaya.net/
2. ನಾಗಭೂಷಣಸ್ವಾಮಿ ಓ ಎಲ್, ೨೦೧೪, ವಚನ ಸಾವಿರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
3. ಬರಗೂರು ರಾಮಚಂದ್ರಪ್ಪ, ೧೯೯೩, ವಚನ ಸಾಹಿತ್ಯದಲ್ಲಿ ಕೆಳವರ್ಗದ ಆಶಯ ಮತ್ತು ಅಭಿವ್ಯಕ್ತಿ, ಸಾಹಿತ್ಯ ಅಕಾಡೆಮಿ, ಬೆಂಗಳೂರು.
4. ಮರುಳಸಿದ್ದಪ್ಪ ಕೆ, ನಾಗರಾಜ ಕಿ, ರಂ, ೨೦೧೨, ವಚನ ಕಮ್ಮಟ, ಸಪ್ನ ಬುಕ್ ಹೌಸ್, ಬೆಂಗಳೂರು.
5. ಮಹಾದೇವಿ ಹಿರೇಮಠ, ೨೦೦೭, ಬಸವಣ್ಣನವರ ವಚನಗಳಲ್ಲಿ ಮಾನವತವಾದ, ಲಿಂಗಾಯತ ಅಧ್ಯಯನ ಅಕಾಡೆಮಿ, ನಾಗೂನೂರು ರುದ್ರಾಕ್ಷಿಮಠ, ಬೆಳಗಾವಿ